ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2022-23 ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಶೈಕ್ಷಣಿಕಾ ವೇಳಾಪಟ್ಟಿ ಬಗ್ಗೆ.

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ:ಇಡಿ 2 ವಿವಿಧ 2021, ದಿನಾಂಕ:29.01.2021

2) ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ರವರ ಪತ್ರದ ದಿನಾಂಕ: 09-07-2022.

******

ಪ್ರಸ್ತಾವನೆ:-

ಮೇಲೆ ಓದಲಾದ (1) ದಿನಾಂಕ:29.01.2021 ರ ಆದೇಶದಲ್ಲಿ ಕೋವಿಡ್ 19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಲಾಕ್‌ಡೌನ್ ಆದ ಕಾರಣ, ವಿದ್ಯಾರ್ಥಿಗಳ ಶೈಕ್ಷಣಿಕ ವರ್ಷದ ಹಿತದೃಷ್ಠಿಯನ್ನು ಮನಗಂಡು, 2020-21 ಮತ್ತು 2021-22 ನೇ ಸಾಲಿಗೆ ಸ್ನಾತಕ/ಸ್ನಾತಕೋತ್ತರ ಶೈಕ್ಷಣಿಕಾ ವೇಳಾಪಟ್ಟಿಯನ್ನು ಎಲ್ಲಾ ವಿಶ್ವವಿದ್ಯಾಲಯಗಳು / ಕಾಲೇಜು ಶಿಕ್ಷಣ / ತಾಂತ್ರಿಕ ಶಿಕ್ಷಣ ಕಾಲೇಜುಗಳಲ್ಲಿ ಜಾರಿಗೊಳಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (2) ದಿನಾಂಕ:09-07-2022 ರ ಪತ್ರದಲ್ಲಿ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ರವರು 2022-23 ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಶೈಕ್ಷಣಿಕಾ ವೇಳಾಪಟ್ಟಿಯನ್ನು ಸಲ್ಲಿಸಿದ್ದು, ಸದರಿ ವೇಳಾಪಟ್ಟಿಯನ್ವಯ ಎಲ್ಲಾ ವಿಶ್ವವಿದ್ಯಾಲಯಗಳು/ಕಾಲೇಜು ಶಿಕ್ಷಣ/ತಾಂತ್ರಿಕ ಶಿಕ್ಷಣ ಕಾಲೇಜುಗಳಲ್ಲಿ ಶೈಕ್ಷಣಿಕಾ ವೇಳಾಪಟ್ಟಿಯನ್ನು ಅನುಷ್ಠಾನಗೊಳಿಸಲು ಸೂಕ್ತ ಆದೇಶ ಹೊರಡಿಸಲು ಕೋರಿರುತ್ತಾರೆ.

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಯೋಜನಾ ಬದ್ಧವಾಗಿ ಮತ್ತು ಸಮರ್ಪಕವಾಗಿ ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಈ ಸಂಬಂಧ ಪಠ್ಯಕ್ರಮದಲ್ಲಿ ಹಲವು ಬದಲಾವಣೆಗಳನ್ನು ತರಲಾಗಿದೆ. ಅದರಂತೆ ವಿದ್ಯಾರ್ಥಿಗಳಿಗೆ ತರಗತಿಗಳನ್ನು ನಡೆಸಿ, ಪರೀಕ್ಷೆಗಳನ್ನು ನಿಗಧಿತ ಕಾಲದಲ್ಲಿ ನಡೆಸಿ, ಫಲಿತಾಂಶವನ್ನು ಪ್ರಕಟಿಸುವುದು ಅತ್ಯವಶ್ಯಕವಾಗಿದೆ.

ಇದಲ್ಲದೇ ವಿದ್ಯಾರ್ಥಿ ವೇತನ (Scholarship programmes) ನ್ನು ವಿವಿಧ ಇಲಾಖೆಗಳಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಇದನ್ನು ಸೂಕ್ತ ಸಮಯದಲ್ಲಿ ಸಮರ್ಪಕವಾಗಿ ವಿದ್ಯಾರ್ಥಿಗಳಿಗೆ ಸದ್ಬಳಕೆಯಾಗಬೇಕಾಗಿರುವುದರಿಂದ ವಿದ್ಯಾರ್ಥಿಗಳಿಗೆ ಅನುವು ಆಗುವಂತೆ ಶೈಕ್ಷಣಿಕಾ ವೇಳಾಪಟ್ಟಿಯನ್ನು ಹೊರಡಿಸಲು ಸರ್ಕಾರವು ತೀರ್ಮಾನಿಸಿದೆ.

ಅದರನ್ವಯ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಇವರು ನೀಡಿರುವ ವರದಿಯನ್ನು ಮೇಲಿನ ಅಂಶಗಳೊಂದಿಗೆ ಪರಿಶೀಲಿಸಲಾಗಿ, 2022-23 ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಶೈಕ್ಷಣಿಕಾ ವೇಳಾಪಟ್ಟಿಯನ್ನು ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ವಿಶ್ವವಿದ್ಯಾಲಯಗಳು / ಕಾಲೇಜು ಶಿಕ್ಷಣ / ಅನುದಾನ/ ಅನುದಾನ ರಹಿತ ಕಾಲೇಜುಗಳಲ್ಲಿ (ತಾಂತ್ರಿಕ ಶಿಕ್ಷಣವನ್ನು ಹೊರತುಪಡಿಸಿ) ಜಾರಿಗೊಳಿಸಲು ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಇಡಿ/ 217/ಯುಎನ್‌ಇ/2022, ಬೆಂಗಳೂರು, ದಿನಾಂಕ: 09-07-2022.**

ಮೇಲೆ ಪ್ರಸ್ತಾವನೆಯಲ್ಲಿ ಕೂಲಂಕಷವಾಗಿ ವಿವರಿಸಿದಂತೆ, 2022-23 ನೇ ಶೈಕ್ಷಣಿಕ ಸಾಲಿನ ಸ್ನಾತಕ / ಸ್ನಾತಕೋತ್ತರ ಶೈಕ್ಷಣಿಕಾ ವೇಳಾಪಟ್ಟಿಯನ್ನು ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ

ಬರುವ ವಿಶ್ವವಿದ್ಯಾಲಯಗಳು / ಕಾಲೇಜು ಶಿಕ್ಷಣ / ಅನುದಾನ/ ಅನುದಾನ ರಹಿತ ಕಾಲೇಜುಗಳಲ್ಲಿ (ತಾಂತ್ರಿಕ ಶಿಕ್ಷಣವನ್ನು ಹೊರತುಪಡಿಸಿ) ಈ ಕೆಳಗಿನಂತೆ ಕೂಡಲೇ ಕಡ್ಡಾಯವಾಗಿ ಜಾರಿಗೊಳಿಸುವಂತೆ ಆದೇಶಿಸಿದೆ.

## Undergraduate

## Common Calendar of Events for close of the Academic Year 2021-22, and start & close of the Academic Year 2022-23, for Undergraduate Programmes in Universities & Colleges

| Sl.No | Academic Activity | Range of dates |
|---|---|---|
| **I** | **Academic Year, 2021-22** | |
| 1. | End of II Semester Classes | **03$^{rd}$ - 17$^{th}$ Sept. 2022** |
| 2. | Commencement of II Semester Examinations | **08$^{th}$ – 22$^{nd}$ Sept. 2022** |
| 2. | End of IV, VI & VIII Semester Classes | **By 30$^{th}$ Aug. 2022** |
| 4. | Commencement of IV, VI & VIII Semester Examinations | **By 8$^{th}$ Sept. 2022** |
| 5. | Commencement of Valuation | **By 15$^{th}$ Sept. 2022** |
| 6. | Announcement of Results | **By 8$^{th}$ Oct. 2022** |
| **II** | **Academic Year, 2022-23** | |
| 1. | Start of I Semester Admissions | **11$^{th}$ July 2022** |
| 2. | Last date for admission to 1$^{st}$ Semester without penal fee | **06$^{th}$ August 2022** |
| 3. | Last date for admission to 1$^{st}$ Semester with penal fee | **16$^{th}$ August 2022** |
| 4. | Commencement of I Semester Classes | **17$^{th}$ – 22$^{nd}$ August 2022** |

| | | |
|---|---|---|
| 5. | End of I Semester Classes | **17th - 24th Dec 2022** |
| 6. | Commencement of I Semester Examinations | **26th – 31st Dec 2022** |
| 7. | Commencement of II Semester Classes | **16th – 23rd January 2023** |
| 8. | End of II Semester Classes | **20th - 27th May 2023** |
| 9. | Commencement of II Semester Examinations | **29thMay – 5thJune 2023** |
| | | |
| 10. | Commencement of III, V & VII Semester Classes | **06th - 12th Oct. 2022** |
| 11. | End of III, V & VII Semester Classes | **28th Jan- 04th Feb 2023** |
| 12. | Commencement of III, V & VII Semester Examinations | **2nd - 9th Feb. 2023** |
| 13. | Commencement of IV, VI & VIII Semester Classes | **1st - 8th March 2023** |
| 14. | End of IV, VI & VIII Semester Classes | **20th - 24th June 2023** |
| 15. | Commencement of Vacation for Teachers | **22nd – 26th June 2023** |
| 16. | Commencement of IV, VI & VIII Semester Examinations | **24th – 29th June 2023** |
| 17. | Commencement of Valuations | **30th June - 5th July 2023** |
| 18. | Announcement of Results | **24th – 29th July 2023** |

-4..

## Post-Graduate

### Common Calendar of Events for close of the Academic Year 2021-22, and start & close of the Academic Year, 2022-23, for Post-Graduate Programmes in Universities and Colleges

| Sl. No | Academic Activity | Range of dates |
|---|---|---|
| **I** | **Academic Year 2021-22** | |
| 1. | End of II Semester Classes | **1st - 15th Oct 2022** |
| 2. | Commencement of II Semester Examinations | **6th – 20th Oct. 2022** |
| 3. | End of IV Semester Classes | **30th July – 13th Aug. 2022** |
| 4. | Commencement of IV Semester Examinations | **4th – 18th Aug. 2022** |
| 5. | Commencement of IV Semester Valuation | **11th – 25th Aug. 2022** |
| 6. | Announcement of IV Semester Results | **3rd – 15th Sept. 2022** |
| **II** | **Academic Year 2022-23** | |
| 1. | Start of I Semester Admissions | **By 15th Oct. 2022** |
| 2. | Last date for admission to 1st Semester without penal fee | **31st Oct. 2022** |
| 3. | Last date for admission to 1st Semester with penal fee | **14th Nov. 2022** |
| 4. | Commencement of I and III Semester Classes | **2nd - 14th Nov. 2022** |
| 5. | End of I and III Semester Classes | **18th – 28th Feb. 2023** |

-5..

| | | |
|---|---|---|
| 6. | Commencement of I and III Semester Examinations | **25th Feb– 7th March 2023** |
| 7. | Commencement of Valuation | **04th -14th March 2023** |
| 8. | Commencement of II & IV Semester Classes | **27thMarch – 3rdApril 2023** |
| 9. | End of II & IV Semesters Classes | **15th -22nd July 2023** |
| 10. | Commencement of II & IV Semester Examinations | **20th - 27th July 2023** |
| 11. | Commencement of Vacation for Teacher | **17th – 22nd July 2023** |
| 12. | Commencement of Valuation | **27th July -3rd Aug 2023** |
| 13. | Announcement of Results | **19th – 26th Aug. 2023** |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶೀತಲ್.ಎಂ.ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1)

ಇವರಿಗೆ:-

1. ಮಾನ್ಯ ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಪ್ರಾಧನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಇಲಾಖೆ.
5. ಆಯುಕ್ತರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು.
6. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
7. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
8. ಕುಲಪತಿಗಳು, ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳು.

-6..

9. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತ್, ಬೆಂಗಳೂರು.
10. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರು (ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಮುಖಾಂತರ)
11. ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರು.
12. ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ವಿಶ್ವವಿದ್ಯಾಲಯಗಳಡಿಯಲ್ಲಿ ಬರುವ ಎಲ್ಲಾ ಕಾಲೇಜುಗಳು (ಸಂಬಂಧಪಟ್ಟ ವಿಶ್ವವಿದ್ಯಾಲಯಗಳ ಮುಖಾಂತರ).
13. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಪ್ರತಿ:

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.